# ಕೊಂಕಣಾ ಮದುವೆ

‘ಮದುವೆ ಅಷ್ಟು ಇಂಪಾರ್ಟೆಂಟ್ ಅಲ್ಲವೇ ಅಲ್ಲ’ ಎಂದು ಇತ್ತೀಚಿನವರೆಗೂ ಹೇಳಿಕೊಂಡು ಓಡಾಡುತ್ತಿದ್ದ ಕೊಂಕಣಾ ಸೇನ್ ಕೊನೆಗೂ ಕಳೆದ ವಾರ ಮದುವೆಯಾಗಿದ್ದಾಳೆ. ಮೂರು ವರ್ಷಗಳಿಂದ ಕೊಂಕಣಾ ಮತ್ತು ನಟ ರಣವೀರ್ ಶೋರಿ ಜತೆಗೇ ವಾಸಿಸುತ್ತಿದ್ದುದು, ಓಡಾಡುತ್ತಿದ್ದುದು ಅವರಿಬ್ಬರ ನಿಕಟ ಸ್ನೇಹಿತರಿಗೆ ಗೊತ್ತಿದ್ದ ವಿಷಯವೇ. ಮದುವೆಯನ್ನೂ ಇಬ್ಬರೂ ಅತ್ಯಂತ ಖಾಸಗಿ ವಿಷಯ ಎಂಬಂತೆ ಮಾಡಿಕೊಂಡಿದ್ದಾರೆ. ಗೋರೆಗಾಂವ್‌ನ ಮನೆಯಲ್ಲಿ ನಡೆದ ಈ ಮದುವೆಗೆ ಆಹ್ವಾನ ಇದ್ದವರೂ ಬಹಳ ಕಡಿಮೆ ಸ್ನೇಹಿತರಂತೆ. ಕೊಂಕಣಾ ತಾಯಿ ಅಪರ್ಣಾ ಸೇನ್ ಹಾಜರಿದ್ದುದು ವಿಶೇಷ.

ಬಾಲಿವುಡ್ ಬೆಳ್ಳನೆಯ ತಾರೆಯರಿಗೆಲ್ಲ ಸೆಡ್ಡು ಹೊಡೆಯುವಂತೆ ಪ್ರತಿಭಾವಂತ ನಟಿಯಾಗಿ ಬೆಳೆದಾಕೆ ಈ ಕೃಷ್ಣಸುಂದರಿ ಕೊಂಕಣಾ. ಪ್ರತಿಯೊಂದು ಸಿನಿಮಾದಲ್ಲೂ ತನ್ನದೇ ಆದ ಛಾಪು ಮೂಡಿಸುವ ಈಕೆ ಮದುವೆಯ ನಂತರವೂ ಬಾಲಿವುಡ್ ತೊರೆಯುವುದಿಲ್ಲ ಎನ್ನುವುದು ಅಭಿಮಾನಿಗಳಿಗೆ ಹೆಮ್ಮೆಯ ವಿಷಯ. ಮದುವೆಯ ದಿನವೇ ನಟ ರಣವೀರ್‌ನ ಹೊಸ ಚಿತ್ರ ‘ಇಮೋಷನಲ್ ಅತ್ಯಾಚಾರ್’ ಬಿಡುಗಡೆಯಾಗಿದ್ದು ಇನ್ನೊಂದು ವಿಶೇಷ.





# ಸುಶ್‌ಗೂ ಇಷ್ಟವಂತೆ!

ಬಾಲಿವುಡ್‌ಗೆ ನಿನ್ನೆ-ಮೊನ್ನೆಯಂತೆ ಬಂದ ಕೊಂಕಣಾ ಮದುವೆಯಾದ ಬೆನ್ನಲ್ಲೇ ಇನ್ನೊಬ್ಬ ಸೀನಿಯರ್ ಬಂಗಾಳಿ ಸುಂದರಿ ಸುಶ್ಮಿತಾ ಸೇನ್ ಮದುವೆಯ ಬಗ್ಗೆ ಮಾತನಾಡಿದ್ದಾಳೆ. ‘23-24 ರಲ್ಲೇ ಮದುವೆಯಾಗಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ನನಗೂ ಮದುವೆ ಆಗಬೇಕೆಂದು ಆಸೆ. ಆದರೆ ಸರಿಯಾದ ಹುಡುಗನೇ ಸಿಗುತ್ತಿಲ್ಲ’ ಎಂದಿದ್ದಾಳೆ 34ರ ಹರೆಯದ ಮಾಜಿ ವಿಶ್ವಸುಂದರಿ ಸುಶ್ಮಿತಾ.

ಅದೂ ನಿಜವೇ. ಹುಡುಗ ಸಿಕ್ಕಿಲ್ಲ ಎಂದು ಸುಶ್ಮಿತಾ ಸುಮ್ಮನೇ ಕುಳಿತವಳೂ ಅಲ್ಲ. ಈಗಾಗಲೆ ರಣದೀಪ್ ಹೂಡಾ, ಮಾನವ್ ಮೆನನ್, ಬಂಟಿ ಸಚ್‌ದೇವ್ ಮುಂತಾದವರ ಜತೆ ಆಕೆಯ ಹೆಸರು ಓಡಾಡಿದ್ದೂ ಆಗಿದೆ. ತೀರಾ ಇತ್ತೀಚೆಗೆ ಕ್ರಿಕೆಟಿಗ ವಾಸಿಂ ಅಕ್ರಂ ಜತೆಗೂ ಓಡಾಡಿದ್ದ ಸುಶ್ ಇನ್ನೇನು ಮದುವೆ ಆಗಿಯೇ ಬಿಟ್ಟಳು ಎಂಬ ಸುದ್ದಿಯೂ ಹಬ್ಬಿತ್ತು. ‘ಸ್ವಲ್ಪ ಸುಮ್ಮನಿರ್ರೀ.. ಮದುವೆ ಆಗೋವಾಗ ನಿಮ್ಮನ್ನೆಲ್ಲ ಕರೆದೇ ಆಗುತ್ತೇನೆ’ ಎಂದೂ ಸುಶ್ಮಿತಾ ಪತ್ರಕರ್ತರಿಗೆ ಆವಾಜ್ ಹಾಕಿದ್ದಾಳೆ!

■ ಬಿಂದು




Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65